# ಕರ್ನಾಟಕ ಸರ್ಕಾರ

**ಸಂಖ್ಯೆ:** ಕಂಇ 158 ಟಿಎನ್‌ಆರ್ 2020 (ಭಾ-1)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಹಡಿ ಕಟ್ಟಡ,
ಬೆಂಗಳೂರು, ದಿನಾಂಕ:15.06.2020

## ಸ್ಪಷ್ಟೀಕರಣ

ಕೇಂದ್ರ ಗೃಹ ಮಂತ್ರಾಲಯದ ಆದೇಶ ಸಂಖ್ಯೆ: 40-3/2020-ಡಿಎಂ-ಐ(ಎ), ದಿನಾಂಕ:30-05-2020ರ ಕಂಟೈನ್‌ಮೆಂಟ್ ವಲಯಗಳಲ್ಲಿ ಲಾಕ್‌ಡೌನ್ ಅನ್ನು ದಿನಾಂಕ:30.06.2020ರ ವರೆಗೆ ವಿಸ್ತರಿಸಿದೆ ಮತ್ತು ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಹಂತ ಹಂತವಾಗಿ ನಿಷೇಧಿತ ಚಟುವಟಿಕೆಗಳನ್ನು ತೆರೆಯಲು ಲಾಕ್‌ಡೌನ್ ಸಡಿಲಿಕೆಯ(ತೆರವು-1)ರ ಬಗ್ಗೆ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ. ತತ್ಪರಿಣಾಮವಾಗಿ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ:ಕಂಇ 158 ಟಿಎನ್‌ಆರ್ 2020, ದಿನಾಂಕ:30.05.2020ರಲ್ಲಿ ಕಂಟೈನ್‌ಮೆಂಟ್ ವಲಯಗಳಲ್ಲಿ ಲಾಕ್‌ಡೌನ್ ಅನ್ನು ದಿನಾಂಕ:30.06.2020ರವರೆಗೆ ವಿಸ್ತರಿಸಿದೆ ಮತ್ತು ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಹಂತ ಹಂತವಾಗಿ ನಿಷೇಧಿತ ಚಟುವಟಿಕೆಗಳನ್ನು ತೆರೆಯಲು ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಮಾರ್ಗಸೂಚಿಗಳು ದಿನಾಂಕ:30.06.2020ರವರೆಗೆ ಜಾರಿಯಲ್ಲಿರುತ್ತವೆ.

ಕೇಂದ್ರ ಗೃಹ ಮಂತ್ರಾಲಯವು ಮತ್ತು ರಾಜ್ಯ ಸರ್ಕಾರವು ಹೊರಡಿಸಿದ ಲಾಕ್‌ಡೌನ್ ಸಡಿಲಿಕೆಯ(ತೆರವು-1) ಮಾರ್ಗಸೂಚಿಗಳಲ್ಲಿ ಹಂತ ಹಂತವಾಗಿ ನಿಷೇಧಿತ ಚಟುವಟಿಕೆಗಳನ್ನು ತೆರೆಯಲು ಅನುಕೂಲವಾಗಿರುತ್ತದೆ.

ಚಲನಚಿತ್ರ / ಟಿವಿ ಚಿತ್ರೀಕರಣ ನಿರ್ಮಾಣವು ಮತ್ತು ತತ್ಸಂಬಂಧದ ಕಾರ್ಯಚಟುವಟಿಕೆಗಳನ್ನು ನಿಷೇಧಿಸಿರುವುದಿಲ್ಲ.

ಆ ಕಾರಣ, ಈ ಕೆಳಗಿನವುಗಳು ಮುಂದುವರೆಸಲು ಅವಕಾಶವಿದೆ:

1. ಲಾಕ್‌ಡೌನ್ ಕಾರಣದಿಂದಾಗಿ ಈಗಾಗಲೇ ಅರ್ಧದಲ್ಲಿಯೇ ಸ್ಥಗಿತಗೊಂಡ ಎಲ್ಲಾ ಚಲನಚಿತ್ರ / ಟಿವಿ ಚಿತ್ರೀಕರಣ ನಿರ್ಮಾಣವನ್ನು ಮುಂದುವರೆಸಲು.
2. ಚಲನಚಿತ್ರ / ಟಿವಿ ಚಿತ್ರೀಕರಣವನ್ನು ಪೂರ್ಣಗೊಳಿಸಿದ ನಂತರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಂದುವರೆಸಲು.

ಕೋವಿಡ್-19ರ ಸಂಬಂಧವಾಗಿ ಹೊರಡಿಸಲಾದ ರಾಷ್ಟ್ರೀಯ ನಿರ್ದೇಶನಗಳನ್ನು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊರಡಿಸುವ ಪ್ರಾಮಾಣಿತ ಕಾರ್ಯವಿಧಾನ(Standard Operation Procedure)ವನ್ನು ಕಡ್ಡಾಯವಾಗಿ ಪಾಲಿಸುವ ಷರತ್ತಿಗೊಳಪಟ್ಟು ಮೇಲಿನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**(ಎನ್.ಮಂಜುನಾಥ್ ಪ್ರಸಾದ್)** 15/6/2020
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
(ವಿಪತ್ತು ನಿರ್ವಹಣೆ, ಭೂಮಿ ಮತ್ತು ಪಿಆರ್)

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.